




ಅಂದರೆ ಕಾಲ ಮತ್ತು ಬದುಕನ್ನು. ಎಳೆಯರು ತಮ್ಮ ಕಥಾಲೋಕದಲ್ಲಿ ಹೆಕ್ಕಿತರುತ್ತಿರುವ ಬದುಕಿನ ಆಯಾಮಗಳನ್ನು ಶೋಧಿಸುವುದು ಒಂದು ಕ್ರಮ. ಇದನ್ನು 'ಕಾಣ್ಕೆ' ಎಂದು ಕರೆಯಬಹುದು. ತಮಗೆ ಗೊತ್ತಿರುವ ಜೀವನವನ್ನು ಹೇಳುವ ಕ್ರಮದಲ್ಲಿ ಎದುರಾಗುವ ತೊಡರುಗಳನ್ನು 'ಕಣ್ಕಟ್ಟು' ಎಂದು ಹೇಳಲಾಗಿದೆ. 'ಕಣ್ಕಟ್ಟು' ಎಂಬ ಶಬ್ದಕ್ಕೆ ಗಾರುಡಿ ಎಂಬ ಅರ್ಥವೂ ಇದೆ. ಮುಂದೆ ಈ ಬರಹ ಇವುಗಳ ನಡುವೆ ಸಾಗಬಹುದು, ಅಥವಾ ಮೀರಬಹುದು.

ಹೊಸಬರ ಕಥೆಗಳನ್ನು ಕುರಿತು ಚರ್ಚೆಮಾಡುವಾಗ 'ಮಾನದಂಡಗಳ' ಪ್ರಶ್ನೆಯೂ ಕಾಡುತ್ತದೆ. ಕನ್ನಡ ಕಥನ ದಾರಿಗಳು ಚಳವಳಿಗಳ ಬೆಳಕಿನಲ್ಲಿ ಕಂಡರೂ, ಈಗ ಮತ್ತೆ ಅದೇ ಕಥನ ಜಗತ್ತನ್ನು ನೋಡುವ ಕ್ರಮಗಳೇ ಬೇರೆಯಾಗಿವೆ. ಕನ್ನಡ ಕಥನಕ್ಕೆ ಕನ್ನಡ ಮಾನದಂಡಗಳು ಎಂಬ ಮಾತನ್ನು ತಿರಸ್ಕರಿಸುವಂತಿಲ್ಲ. ಹೊರಗಿನ ಮಾನದಂಡಗಳನ್ನು ಎರಕ ಹೊಯ್ಯುವುದು




ಅಪಾಯವೇ. ಸಾಮಾನ್ಯವಾಗಿ ಸಾಹಿತ್ಯದಂತಹ ಕಲೆಯ ಸಾಮಗ್ರಿಯನ್ನು ಗ್ರಹಿಸುವುದು ಅಂತಿಮವಾಗಿ ಸತ್ಯ ಮತ್ತು ಅನುಭವಗಳ ಮೂಲಕ. ಕಲ್ಪನೆ ಎಂಬುದು ಈಗ ಕೊಂಚ ಮಸುಕಾಗುತ್ತಿರಬಹುದು. ಆದರೆ, ಸಾಹಿತ್ಯದ ಕೂಸಾದ ಕಥನದಲ್ಲಿ ಕಲ್ಪನೆಯೂ ಕೂಡ ಸತ್ಯ ಅಥವಾ ಅನುಭವಗಳ ವೇಷವನ್ನು ಧರಿಸಬೇಕು. ಎಳೆಯರು ಕಲ್ಪನೆಗೆ ಬಣ್ಣಗಟ್ಟುವಾಗ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿರುವುದು ಕಾಣುತ್ತೇವೆ. ಈ ಹಿನ್ನೆಲೆಯ ಚರ್ಚೆ ಅಗತ್ಯ. ತೊಂಬತ್ತರ ದಶಕದ ಕಥನದ ಹಾದಿಯನ್ನು ಒಳಗೊಂಡಂತೆ ನಾವು ಮೂರು ಕಥನ ಮಾರ್ಗಗಳನ್ನು ಗುರುತಿಸಬಹುದು. ನಾನೀಗ ಚರ್ಚೆಗೆ ಎತ್ತಿಕೊಂಡಿರುವುದು ಮೂರನೇ ಮಾರ್ಗವನ್ನು. ಈ ಮಾರ್ಗದಲ್ಲಿ ಅನೇಕ ಕಥೆಗಾರರು ಬಂದಿದ್ದಾರೆ; ಬರುತ್ತಿದ್ದಾರೆ. ಇವರ ಕಥನ ಮಾದರಿಗಳು; ಅಭಿವ್ಯಕ್ತಿಯ ವಿನ್ಯಾಸಗಳು; ಕಾಣ್ಕೆಯ ಸಮಸ್ಯೆಗಳು ಇತ್ಯಾದಿ ವಿಚಾರಗಳ ಕುರಿತು ವಿಶ್ಲೇಷಣೆ ನಡೆಸಬಹುದು. ಮೇಲೆ ಹೇಳಿದ




ಮೂರು ಮಾರ್ಗಗಳನ್ನು ಕೊಂಚ ವಿವರಿಸುವುದಾದರೆ – ಜಯಂತ ಕಾಯ್ಕಿಣಿ, ಎಂ.ಎಸ್. ಶ್ರೀರಾಮ್, ಕೇಶವ ಮಳಗಿ, ವಿವೇಕ ಶಾನಭಾಗ, ಅಮರೇಶ ನುಗಡೋಣಿ, ಅಬ್ದುಲ್ ರಶೀದ್, ಶ್ರೀಧರ ಬಳಗಾರ, ನೇಮಿಚಂದ್ರ, ನಾಗವೇಣಿ ಎಚ್., ನಟರಾಜ್ ಹುಳಿಯಾರ್, ಮೊಗಳ್ಳಿ ಗಣೇಶ್, ಎಸ್. ಗಂಗಾಧರಯ್ಯ, ಲೋಕೇಶ ಅಗಸನಕಟ್ಟೆ, ಚನ್ನಪ್ಪಕಟ್ಟಿ, ಬಿ.ಟಿ. ಜಾಹ್ನವಿ ಮುಂತಾದವರು ಮೊದಲ ಮಾರ್ಗಕ್ಕೂ, ವಸುಧೇಂದ್ರ, ಮಂಜುನಾಥ್ ಲತಾ, ಮಹಾಂತೇಶ ನವಲಕಲ್, ಸುನಂದಾ ಕಡಮೆ, ಅನುಪಮಾ ಪ್ರಸಾದ್, ಸುಮಂಗಲಾ, ದು. ಸರಸ್ವತಿ, ಚೀಮನಹಳ್ಳಿ ರಮೇಶಬಾಬು, ಇಂದ್ರಕುಮಾರ್, ಬಿ. ಕನಕರಾಜ್, ಕಲಿಗಣನಾಥ ಗುಡದೂರು, ವಿ.ಎಂ. ಮಂಜುನಾಥ, ರಘುನಾಥ ಚ.ಹ., ಸಂದೀಪ ನಾಯಕ, ನಾಗಮಂಗಲ ಕೃಷ್ಣಮೂರ್ತಿ, ವಿಕ್ರಮ್ ಹತ್ವಾರ್, ಆನಂದ ಕುಂಚನೂರು, ಮೌನೇಶ್ ಬಡಿಗೇರ್, ಕಲ್ಲೇಶ್ ಕುಂಬಾರ, ಬಸವಣ್ಣೆಪ್ಪ,